**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 679/2022 ಫ್ರಾ.ಸಾ - 2**

**ಚಾ.ಸಾ – 2**

**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೇಯಾ ಜಿ |
| ಗಂಡನ ಹೆಸರು | : | ಜೀವನ್ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ಮತ್ತು ನನ್ನ ಗಂಡ ಗೋಣಿಕೊಪ್ಪಕ್ಕೆ ಮನೆಗೆ ನೆಂಟರು ಬರುತ್ತಿದ್ದಾರೆ ಎಂದು ಸಾಮಾನು ತರಲು ಹೋಗಿದ್ದು, ಅಲ್ಲಿ ಗುಂಪೊಂದು ನನ್ನನ್ನು ನೋಡಿ ಚೇಷ್ಟೇ ಮಾಡಿರುತ್ತಾರೆ, ಆದರೆ ಆ ಗುಂಪಿನಲ್ಲಿದ್ದ ವ್ಯಕ್ತಿ ಯಾರೆಂದು ಈಗ ಗುರುತಿಸಲಾಗುವುದಿಲ್ಲ. ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ನನ್ನ ಗಂಡನಿಗೂ , ಆರೋಪಿಗೂ ಆ ದಿನ ಯಾವುದೇ ಜಗಳವಾಗಿರುವುದಿಲ್ಲ, ನಾವುಗಳು ಅಲ್ಲಿಂದ ವಾಪಸ್ ಬಂದು ಬಿಟ್ಟೆವು. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿ. 26.12.2021 ರಂದು ಸಂಜೆ 05.30 ಸಮಯದಲ್ಲಿ ಗೋಣಿಕೊಪ್ಪ ಬೈ ಪಾಸ್ ರಸ್ತೆಯ ಜಯಲಕ್ಷ್ಮೀ ವೈನ್ ಸಮೀಪ ಆರೋಪಿ ನನಗೆ ಚೇಷ್ಟೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೂ, ಆರೋಪಿಗೂ Classic hotel ಬಳಿ ಆರೋಪಿ ಮು ಮಾ 1

ಕಲ್ಲಿನಿಂದ ಹೊಡೆದು ರಕ್ತ ಗಾಯಪಡಿಸಿದ ಎಂದರೆ ಸರಿಯಲ್ಲ. ಆರೋಪಿಯೇ ನನ್ನನ್ನು ಆದಿನ ಚೇಷ್ಟೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ಈ ಬಗ್ಗೆ ದೂರು ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಗಂಡ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆರೋಪಿಯ ರಾಜೀ ಮಾಡಿಕೊಂಡಿದ್ದು, ಆತ ತಪ್ಪಾಯಿತು ಎಂದು ಕೇಳಿಕೊಂಡಿದ್ದಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದು ಆ ಹೇಳಿಕೆಯನ್ನು ಓದಿ ಹೇಳಿದ್ದು, ಅದನ್ನು ಅಲ್ಲಗೆಳೆದ ಕಾರಣ ಅದನ್ನು ನಿ. ಪಿ. 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ. ಬಿ. ಎ ವಕೀಲರಿಂದಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ